# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1295 (1499)

ಸದಸ್ಯರ ಹೆಸರು : ಡಾ|| ಆರತಿ ಕೃಷ್ಣ (ನಾಮ ನಿರ್ದೇಶಿತರು)

ಉತ್ತರಿಸಬೇಕಾದ ದಿನಾಂಕ: : 17.03.2026

ಉತ್ತರಿಸುವ ಸಚಿವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು .

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಡೂರು-ಚಿಕ್ಕಮಗಳೂರು-ಬೇಲೂರು ಹೊಸ ರೈಲ್ವೆ ಮಾರ್ಗದ (68 ಕಿ.ಮೀ) ಭಾಗವಾಗಿ 56 ಕಿ.ಮೀ ಮಾರ್ಗವು ಕಾರ್ಯಾರಂಭ ಮಾಡಿದ್ದು, ಉಳಿದ ಮಾರ್ಗದ ಕಾಮಗಾರಿಗಳನ್ನು ರೈಲ್ವೆ ಇಲಾಖೆ ಯಾವಾಗ ಪೂರ್ಣಗೊಳಿಸಬಹುದೆಂಬ ಮಾಹಿತಿ ರಾಜ್ಯ ಸರ್ಕಾರದ ಗಮನದಲ್ಲಿದೆಯೇ; (ಮಾಹಿತಿ ಒದಗಿಸುವುದು) | ಕಡೂರು – ಚಿಕ್ಕಮಗಳೂರು – ಬೇಲೂರು ನೂತನ ರೈಲು ಮಾರ್ಗ (68 ಕಿ.ಮೀ) ಯೋಜನೆಯನ್ನು 2010-11 ನೇ ಸಾಲಿನಲ್ಲಿ ಮಂಜೂರು ಮಾಡಲಾಗಿದ್ದು, ಇದರ ಭಾಗವಾದ ಕಡೂರು-ಚಿಕ್ಕಮಗಳೂರು (46 ಕಿ.ಮೀ) ಮಾರ್ಗವನ್ನು 2013 ರಲ್ಲಿ ಕಾರ್ಯಾರಂಭ ಮಾಡಲಾಗಿರುತ್ತದೆ. ಉಳಿದ ಭಾಗವಾದ ಚಿಕ್ಕಮಗಳೂರು-ಹಾದಿಹಳ್ಳಿ (9.1 ಕಿ.ಮೀ) ಹಾಗೂ ಹಾದಿಹಳ್ಳಿ-ಬೇಲೂರು (12.9 ಕಿ.ಮೀ) ಮಾರ್ಗದ ಕಾಮಗಾರಿಯು ಪ್ರಗತಿಯಲ್ಲಿದೆ. ಮೇ-2026 ರೊಳಗೆ ಕಾರ್ಯಾರಂಭಗೊಳಿಸುವ ಗುರಿಯನ್ನು ಹೊಂದಲಾಗಿದೆ. |
| (ಆ) | ಹಾಸನ – ಬೇಲೂರು ಹೊಸ ರೈಲು ಮಾರ್ಗಕ್ಕೆ ಭೂಮಿ ಹಸ್ತಾಂತರವಾಗಿದೆಯೇ; ಆಗಿಲ್ಲದಿದ್ದರೆ ಇನ್ನೂ ಭೂಸ್ವಾಧೀನ ಪ್ರಕ್ರಿಯೆ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು? | ಕಡೂರು-ಚಿಕ್ಕಮಗಳೂರು-ಬೇಲೂರು ನೂತನ ರೈಲು ಮಾರ್ಗ (68 ಕಿ.ಮೀ) ಯೋಜನೆಗೆ ಅಗತ್ಯವಿದ್ದ ಒಟ್ಟು ಭೂಮಿ 323.12 ಎಕರೆಗಳನ್ನು ಸ್ವಾಧೀನಪಡಿಸಿಕೊಂಡು ಈಗಾಗಲೇ ರೈಲ್ವೆ ಇಲಾಖೆಗೆ ಹಸ್ತಾಂತರಿಸಲಾಗಿದೆ. |

ಸಂಖ್ಯೆ: ಮೂಅಇ 67 ರಾರಾಹೆ 2026

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ
ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು